


ಎಡದಿಂದ ಬಲಕ್ಕೆ :

1. ಮೂರ್ಖರಂತಿದ್ದರೂ ಕೈಗೆ ಬುದ್ಧಿ ಬೆರೆತರೆ ಭಾರೀ ಕೈಚಳಕ (4)
3. ಸೊಟ್ಟಗೋ, ನೆಟ್ಟಗೋ ವ್ಯಾಪಾರವಂತೂ ಒಟ್ಟು ಮೊತ್ತದ್ದು (3)
4. ಗುಣಗಾನದ ಮುಖ್ಯ ವಿಷಯ ಉನ್ನತ ಆಕಾಶ (3)
6. ಕಪ್ಪು ಮೋರೆಯ ಮಂಗ ಮಗು (4)
7. ಹಸ್ತ ಸಾಮುದ್ರಿಕಾ ಪುಸ್ತಕ ಅಚ್ಚು ಮಾಡಿದವ ಈತನೇ (3)
9. ಆತನ ಭಾರೀ ಅಹಂಕಾರಕ್ಕೆ ಮೂಲ ಏನು?(3)
11. ಹಗೆತನ ಬೆಳೆದದ್ದು ಹೇಗೆಂಬುದೇ ಅರ್ಥವಾಗುತ್ತಿಲ್ಲ ! (3)
13. ಕಳ್ಳರ ಅಧೀನದಲ್ಲಿ ಚೆನ್ನಮ್ಮನ ನಾಡು (3)
15. ಆಶೆಗಳಿಗೆ ಪರವಶವಾದರೆ ಅದೂ ಕೊರಳಿಗೆ ಉರುಳೇ ಆದೀತು (4)
17. ಮತ ಹಾಕುವ ಕಾಲದಲ್ಲಿ ಇದೆಂಥ ಯುದ್ಧ? (3)
18. ಈ ಮೇಜನ್ನು ನಿರ್ಮಿಸಿದ್ದು ಮಾನವನೇ ತಾನೇ (3)
19. ಜೋಕುಮಾರನ ಮನೆಯ ಮುಖ್ಯಸ್ಥ ಈತ (4)

ಮೇಲಿಂದ ಕೆಳಕ್ಕೆ :

1. ಕಾಟ ಕೊಟ್ಟು ಪ್ರಾಣ ತೆಗೆವ ಕ್ರೂರಿ (3)
2. ಗುರುತಿದೆಯೇ, ಮಡಿಕೆ ಮಾಡುವ ಚಕ್ರ? (3)
3. ಸೋದರರ ಮುಂದೆ ಸಾಗರದ ಒಂದು ಭಾಗ (3)
5. ಕುಡುಕ ಜನರನ್ನು ಕಂಡರೇ ಹೆದರಿಕೆ (3)
7. ಮರುಗುತ್ತಿದ್ದವರಿಗೆ ಮಾರ್ಗ ತೋರಿದ್ದು ಕೃಷ್ಣ (3)
8. ದಕ್ಷಿಣ ದಿಕ್ಕಿನಲ್ಲಿ ನಡೆದದ್ದು ಭಾರೀ ಯುದ್ಧ (3)
9. ಅಟ್ಟದ ಮೇಲಕ್ಕೆ ತುಂಬಿದ್ದಾಯಿತು – ಒಬ್ಬರೀ ಕ್ರೀಡಾ ಸಾಮಗ್ರಿ (3)
10. ದೇವರ ಸನ್ನಿಧಿಗೆ ಹಣ ನೀಡಿದ ದಾಖಲೆ (3)
12. ಹೊಳಪು ತುಂಬುವ ಈ ತಂತ್ರ ಹೊಸದೇನಲ್ಲ , ಬಿಡಿ (3)
14. ಜೇಬುಗಳ್ಳರ ನಡುವೆ ತಲೆ ಕೆಳಗಾಯಿತು ಕಲಹ (3)
15. ಹಿಮಾಲಯದಲ್ಲೂ ಒಂದು ಮನೆ ನೋಡಬಹುದೇ ? (3)
16. ನಾಶ ಮಾಡಿದ ಕಿಚ್ಚು , ಕಡೆಗೂ ಆಯಿತು ಶಾಂತ (3)

## 24-12-15ರ ಉತ್ತರಗಳು

ಎಡದಿಂದ ಬಲಕ್ಕೆ :

1. ಅಸಮ್ಮತ 3. ವಿನಾಶ 4.ಗಾವಿಲ 6. ಮಹಾಲಯ 8. ಕರಿನೀರು 10. ಕಶೇರುಕ 12. ತಲಾಂತರ 16. ಮುರಾರಿ 17. ರಸಾಲ 18. ಕಕ್ಕರಿಕೆ

ಮೇಲಿಂದ ಕೆಳಕ್ಕೆ :

1. ಅಶನ 2. ತಗಾದೆ 3. ವಿಶಾಲ 5. ಲಹರಿ 6. ಮರ್ತ್ಯ ಲೋಕ 7. ಯಕ್ಷಲೋಕ 8. ಕಳಂಕಿತ 9. ರುಚಿಕರ 11. ರುಸುಮು 13. ಲಾಂಗೂಲ 14. ಅರಿಕೆ 15. ಬೆರಕೆ

# ಅಂತರಿಕ್ಷ ಜಲಪಾತ

**ಹೆ**ಸರೇ ಸೂಚಿಸುವಂತೆ ಅದು ಬಾಹ್ಯಾಕಾಶದಲ್ಲಿ, ನಕ್ಷತ್ರ ಲೋಕದಲ್ಲಿ ಜರುಗುತ್ತಿರುವ ವಿಸ್ಮಯದ ಒಂದು ವಿದ್ಯಮಾನದ ದೃಶ್ಯ (ಚಿತ್ರ 1). ನಮ್ಮ ಕ್ಷೀರಪಥ ಗ್ಯಾಲಕ್ಸಿಯಲ್ಲೇ ಇರುವ ಈ ನಿರ್ಮಿತಿಯಲ್ಲಿ ವಾಸ್ತವವಾಗಿ 'ಜಲ' ವಂತೂ ಕಿಂಚಿತ್ತೂ ಇಲ್ಲ. ರಭಸದಿಂದ ಸುರಿಯುತ್ತಿರುವ ಜಲರಾಶಿಯನ್ನು ಹೋಲುವ ಈ ದೃಶ್ಯದಲ್ಲಿರುವ 'ಜಲಧಾರೆ'ಯ ಅಗಲ – ಎತ್ತರಗಳು ಸಾವಿರಾರು ಕಿಲೋಮೀಟರ್ ಗೂ ಅಧಿಕ. ಇನ್ನು ಈ ಜಲಪಾತ ನಮ್ಮಿಂದ ಇರುವ ದೂರವಂತೂ ಕಲ್ಪನಾತೀತ : ಆ ದೂರ ಸುಮಾರು ಒಂದೂವರೆ ಸಾವಿರ ಜ್ಯೋತಿರ್ವರ್ಷ !

ವಸ್ತು ಸ್ಥಿತಿ ಏನೆಂದರೆ ಜ್ಯೋತಿರ್ಮೇಘ ವೊಂದರಲ್ಲಿ ಈಗಿನ್ನೂ ಮೈದಳೆಯುತ್ತಿರುವ ಒಂದು ನಕ್ಷತ್ರ ಈ ದೃಶ್ಯಕ್ಕೆ ಮೂಲ. ಆ ನಕ್ಷತ್ರದಿಂದ ಅಪಾರ ಪ್ರಮಾಣದ – ಪ್ರತಿ ಸೆಕೆಂಡ್ ಗೂ ಮಿಲಿಯಾಂತರ ಟನ್ ಪ್ರಮಾಣದ – ಅಧಿಕ ಶಕ್ತಿಯ ಕಣಗಳ ರಾಶಿ ಚಿಮ್ಮಿ, ಸಿಡಿದು ಎರಚಲ್ಪಡುತ್ತಿದೆ. ಜೊತೆ ಜೊತೆಗೇ ಆ ನಕ್ಷತ್ರದ ಸುತ್ತಲಿನ ಅನಿಲ ರಾಶಿ ಅದೇ ನಕ್ಷತ್ರದತ್ತ ಸುರಿದು ಬೀಳುತ್ತಿದೆ. ಇವಿಷ್ಟೂ ಸೇರಿ ಈ ಅಂತರಿಕ್ಷ ಜಲಪಾತ ಮೈದಳೆದಿದೆ.

ವಿಸ್ಮಯ ಏನೆಂದರೆ ಅಂತರಿಕ್ಷ ಜಲಪಾತದಂತಹ ದೃಶ್ಯಗಳು ವಿಶ್ವದಲ್ಲಿ ಅಪರೂಪವೇನಲ್ಲ. ವಿಶೇಷವಾಗಿ 'ಗ್ರಹೀಯ ನೀಹಾರಿಕೆ'ಗಳಿಂದ ರೂಪುಗೊಂಡಿರುವ ದೃಶ್ಯಗಳದು ಹೇರಳ ಸಂಖ್ಯೆ , ಅಸೀಮ ವೈವಿಧ್ಯ ಮತ್ತು ಅನುಪಮ ಸೌಂದರ್ಯ. ನಮ್ಮ ಸೂರ್ಯನಂತಹ ನಕ್ಷತ್ರಗಳು ತಮ್ಮ ಬಾಳಿನ ಅಂತಿಮ ಹಂತದಲ್ಲಿ ತಮ್ಮದೇ ಹೊರ ಪದರಗಳನ್ನೆಲ್ಲ ಕಳಚುತ್ತವೆ; ಈ ಪದರಗಳು ಕೇಂದ್ರದಲ್ಲಿ ಉಳಿವ ದಟ್ಟ, ಸಾಂದ್ರ, ಉಜ್ವಲ 'ಶ್ವೇತ ಕುಬ್ಜ' ದ ಸುತ್ತ ಕಲ್ಪನಾತೀತ ಚಿತ್ರ – ವಿಚಿತ್ರ ಆಕಾರಗಳಲ್ಲಿ ಹರಡಿಕೊಳ್ಳುತ್ತವೆ (ಚಿತ್ರ 2). ಇಂತಹ ಗ್ರಹೀಯ ನೀಹಾರಿಕೆಗಳು ನಮಗೆ ಪರಿಚಿತವಾದ ಬೇಕಾದಷ್ಟು ವಿವಿಧ ಸಜೀವಿ – ನಿರ್ಜೀವಿಗಳನ್ನು ಹೋಲುವ ಆಕಾರಗಳಲ್ಲಿ ಅನಾವರಣ ಗೊಳ್ಳುತ್ತವೆ ; ಅವಕ್ಕನುಗುಣವಾಗಿಯೇ ಅವುಗಳನ್ನು ಹೆಸರಿಸಲಾಗಿದೆ ಕೂಡ : 'ಕುದುರೆ ತಲೆ , ಬೆಕ್ಕಿನ ಕಣ್ಣು, ಆನೆ ಸೊಂಡಿಲು, ಕೆಂಪು ಜೇಡ,




ಇರುವೆ, ಪಾತರಗಿತ್ತಿ ... ಇತ್ಯಾದಿ. ಗ್ರಹೀಯ ನೀಹಾರಿಕೆಗಳಷ್ಟೇ ಅಲ್ಲದೆ ಸೂಪರ್ ನೋವಾ ಅವಶೇಷ ಗಳು, ಗ್ಯಾಲಕ್ಸಿಗಳು ಕೂಡ ಕುತೂಹಲದ ದೃಶ್ಯಗಳನ್ನು ಸೃಜಿಸಿ ಕಂಗೊಳಿಸುತ್ತವೆ.

ಸ್ಪಷ್ಟವಾಗಿಯೇ ಈ ಯಾವ ಸ್ವರ್ಗೀಯ, ವರ್ಣಮಯ ದೃಶ್ಯಗಳೂ ಬರಿಗಣ್ಣಿಗೆ ನೇರ ಗೋಚರವಲ್ಲ. ಭಾರೀ ದೂರದರ್ಶಕಗಳು ಮತ್ತು ಬಾಹ್ಯಾಕಾಶ ದೂರದರ್ಶಕಗಳ ಮೂಲಕವಷ್ಟೇ ಈ ದೃಶ್ಯಗಳ ಸಾಕ್ಷಾತ್ಕಾರ ಸಾಧ್ಯ.

■ ಎನ್. ವಾಸುದೇವ್